1	2	3	4
2.	ಯಾದಗಿರಿ	ಯಾದಗಿರಿ	48
		ಶಹಾಪುರ	63
		ಚಿತ್ತಾಪುರ	42
3	ಬೀದರ್	ಬೀದರ್	73
		ಹುಮನಾಬಾದ್	47
		ಬಸವಕಲ್ಯಾಣ	32
		ಭಾಲ್ಕಿ	41
4	ರಾಯಚೂರು	ರಾಯಚೂರು ಘಟಕ–1	39
		ರಾಯಚೂರು ಘಟಕ–2	47
		ಲಿಂಗಸುಗೂರು	61
		ಸಿಂಧನೂರ	43
		ಮಾನವಿ	36
5	ಕೊಪ್ಪಳ	ಕೊಪ್ಪಳ	33
		ಕುಷ್ಟಗಿ	30
		ಯಲಬುರ್ಗಾ	24
		ಗಂಗಾವತಿ	25
6	ಬಳ್ಳಾರಿ	ಬಳ್ಳಾರಿ ಘಟಕ–1	53
		ಬಳ್ಳಾರಿ ಘಟಕ–2	24
		ಹೊಸಪೇಟೆ	55
		ಕೂಡ್ಲಗಿ	48
			31

ಹಿರೇಕೆರೂರು ಕ್ಷೇತ್ರದ ಹಳ್ಳೂರು ಗ್ರಾಮದಲ್ಲಿ 33 ಕೆ ವಿ ಸಬ್ ಸ್ಟೇಷನ್ ಸ್ಥಾಪನೆಯ ಬಗ್ಗೆ

584 (822) ಶ್ರೀ ಬಿ ಹೆಚ್ ಬನ್ನಿಕೋಡ್ (ಹಿರೇಕೆರೂರು) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿದ್ಯುತ್ ತೊಂದರೆಯಿಂದ ಸಂಕಷ್ಟಕ್ಕೆ ಈಡಾಗಿ ಆಗಾಗ ಧರಣಿ ಸತ್ಯಾಗ್ರಹಗಳ ಮೂಲಕ ಗಮನ ಸೆಳೆದಿರುವುದನ್ನು ಸರ್ಕಾರ ಗಮನಿಸಿದೆಯೇ

ಆ) ಹಿರೇಕೆರೂರು ತಾಲ್ಲೂಕಿನ ಹಳ್ಳೂರು ಗ್ರಾಮದ ಹತ್ತಿರ ಹೊಸದಾಗಿ 33 ಕೆ ವಿ ಸಬ್ ಸ್ಟೇಷನ್ ಕಾಮಗಾರಿ ನಿಗದಿತ ಸಮಯದಲ್ಲಿ ಪೂರ್ಣಗೊಳ್ಳದೇ ವಿಳಂಬಕ್ಕೆ ಕಾರಣಗಳೇನು

ಇ) ಹಳ್ಳೂರು ಸಬ್ ಸ್ಟೇಷನ್ ಸ್ಥಾಪನೆ ಕಾರ್ಯ ಪೂರ್ಣಗೊಳಿಸಲು ಇಲಾಖೆ ತೆಗೆದುಕೊಂಡ ಕ್ರಮಗಳೇನು ಆದ ಪ್ರಗತಿ ಏನು

ಈ) ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಸಹಾಯವೆಷ್ಟು, (ಈ ಕಾಮಗಾರಿಯ ಅಂದಾಜು ಮೊತ್ತ ವೆಚ್ಚದ ವಿವರ ನೀಡುವುದು)?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಹೌದು ಗಮನಿಸಿದೆ

ಆ) ಸಂಬಂಧಿಸಿದ ಗುತ್ತಿಗೆದಾರರ ಮಂದ ಪ್ರವೃತ್ತಿ ಹಾಗೂ ಬೇಜವಾಬ್ದಾರಿಯೇ ಕಾಮಗಾರಿಯ ವಿಳಂಬಕ್ಕೆ ಮುಖ್ಯ ಕಾರಣ

ಇ) ಈ ಮುಂಚಿನ ಗುತ್ತಿಗೆದಾರರ ಗುತ್ತಿಗೆಯನ್ನು ಡಿಸೆಂಬರ್ 2003ರಲ್ಲಿ ರದ್ದುಪಡಿಸಲಾಗಿದ್ದು, ಹೊಸ ಗುತ್ತಿಗೆದಾರರನ್ನು ಗೊತ್ತುಪಡಿಸಲು ಮರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆದಷ್ಟು ಶೀಘ್ರಗತಿಯಲ್ಲಿ ಹೊಸ ಗುತ್ತಿಗೆದಾರರಿಗೆ ಕೆಲಸವನ್ನು ವಹಿಸಿಕೊಡಲಾಗುವುದು

ಈ) ಈ ಕಾಮಗಾರಿಯ ಒಟ್ಟು ಅಂದಾಜು ಮೊತ್ತ 157 0 ಲಕ್ಷ ರೂ ಇದುವರೆವಿಗೆ ಮಾಡಲಾಗಿರುವ ಒಟ್ಟು ವೆಚ್ಚ 84 84 ಲಕ್ಷ ರೂ ಗಳು ಆದುದರಿಂದ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾಗುವ ಹಣ /2 16 ಲಕ್ಷ ರೂ

ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ತ್ ಬಳಕೆಯ ಬಗ್ಗೆ

637 (596) ಶ್ರೀ ಕೃಷ್ಣಮೂರ್ತಿ ಕೆ ಎಂ (ಕಡೂರು) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶಗಳಲ್ಲಿರುವ ಬೀದಿ ದೀಪಗಳಿಗೆ ವಿದ್ಯುತ್ ಕಂಪನಿಗಳು ಎಷ್ಟು ಬಗ ನಿಗಧಿ ಪಡಿಸಿರುತ್ತಾರೆ ಕನಿಷ್ಟ ಮತ್ತು ಗರಿಷ್ಟ ದರ (ವಿವರ ಒದಗಿಸುವುದು)

ಆ) ಗ್ರಾಮಾಂತರ ಪ್ರದೇಶಗಳಲ್ಲಿ ರಾತ್ರಿ ವೇಳೆಯಲ್ಲಿ ವಿದ್ಯುತ್ ಸರಬರಾಜು ಇಲ್ಲದಿದ್ದರೂ, ರಸ್ತೆಯಲ್ಲಿ ವಿದ್ಯುತ್ ದೀಪವಿಲ್ಲದಿದ್ದರೂ ಹಾಗೂ ಸಮರ್ಪಕವಾಗಿ ವಿದ್ಯುತ್ ಸರಬರಾಜು ಇಲ್ಲಗಿದ್ದರೂ ಗ್ರಾಮ ಪಂಚಾಯಿತಿಯವರು, ಕೆ ಪಿ ಟಿ ಸಿ ಎಲ್‌ಗೆ ಲೈನ್ ಕಮಿಷನ್ ದರವನ್ನು ಪಾವತಿಸಲೇ ಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಸದರಿ ಹಣವನ್ನು ಗ್ರಾಮ ಪಂಚಾಯಿತಿ/ಜಿಲ್ಲಾ ಪಂಚಾಯಿತಿ ಅಥವಾ ಸರ್ಕಾರ ಭರಿಸುತ್ತದೆಯೇ

ಈ) ವಿದ್ಯುತ್ ಸರಬರಾಜು ಹಣವನ್ನು ಗ್ರಾಮ ಪಂಚಾಯಿತಿಯವರು ತುಂಬುವುದರಿಂದ ಗ್ರಾಮ ಪಂಚಾಯಿತಿಯ ಸರ್ವತೋಮುಖ ಅಭಿವೃದ್ಧಿಯ ಕಾಮಗಾರಿಗಳನ್ನು ಮಾಡದೇ ಕುಂಠಿತಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸರ್ಕಾರವು ಈ ಬಗ್ಗೆ ಪರ್ಯಾಯ ಕ್ರಮ ಹಮ್ಮಿಕೊಳ್ಳುವ ಸದುದ್ದೇಶ ಇದೆಯೇ?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಗ್ರಾಮಾಂತರ ಪ್ರದೇಶಗಳಲ್ಲಿರುವ ಬೀದಿ ದೀಪಗಳಿಗೆ ದಿನಾಂಕ 1 4 2003 ರಿಂದ ಅನ್ವಯವಾಗುವಂತೆ ಈ ಕೆಳಕಂಡ ದರಗಳನ್ನು ವಿಧಿಸಲಾಗುತ್ತಿದೆ

1 ಮೀಟರ್ ಅಳವಡಿಸಿರುವ ಸ್ಥಾಪನಗಳಿಗೆ

ನಿಗಧಿತ ದರ ಮಂಜೂರಾದ ಪ್ರತಿ ಕಿ ವ್ಯಾ.ಗೆ ರೂ 50 00 ಮತ್ತು ಆ ತಿಂಗಳಲ್ಲಿ ಬಳಸಿದ ಎಲ್ಲಾ ಯೂನಿಟ್ಟುಗಳಿಗೆ, ಪ್ರತಿ ಯೂನಿಟ್ಟಿಗೆ ರೂ 3 10